ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಬೆಂಗಳೂರು ನಗರದಲ್ಲಿ ಕನ್ಸರ್ವೆನ್ಸಿ ರಸ್ತೆಗಳಿಗೆ ಗೇಟ್ ಅಳವಡಿಸಿರುವ ಬಗ್ಗೆ

ಶ್ರೀ ಆರ್. ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

290 (338) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗಳ ಹಿಂಭಾಗದಲ್ಲಿ ಸಣ್ಣ ಸಣ್ಣ ರಸ್ತೆಗಳಿದ್ದು (ಹಿಂದಿನ ಕನ್ಸರ್ವೆನ್ಸಿ ರಸ್ತೆಗಳು) ಅವುಗಳಿಗೆ ಕಬ್ಬಿಣದ ಗೇಟುಗಳನ್ನು ಯಾರು ಹಾಕಿಸಲು ಅನುಮತಿ ನೀಡಲಾಗಿದೆ; ನೀಡಿದ್ದಲ್ಲಿ ಇದಕ್ಕೆ ಕಾರಣವೇನು;

(ಆ) ಈ ಸಣ್ಣ ರಸ್ತೆಗಳಲ್ಲಿ ಅನೇಕ ಮನೆಗಳಿದ್ದು ಜನರು ಓಡಾಡಲು ಅವಕಾಶವಿದ್ದು ರಾತ್ರಿ ವೇಳೆ ಗೇಟುಗಳನ್ನು ಮುಚ್ಚುವುದರಿಂದ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಅನೇಕ ರಸ್ತೆಗಳನ್ನು ರಾತ್ರಿ ವೇಳೆ ಮುಂದೆ ವಾಸ ಮಾಡುವ ಮನೆ ಮಾಲೀಕರು ತಮ್ಮ ವಾಹನಗಳನ್ನು ನಿಲ್ಲಿಸಿಕೊಂಡು ಗೇಟ್ ಬೀಗ ಹಾಕಿ, ತಮ್ಮ ಸ್ವಂತ ಆಸ್ತಿಯಂತೆ ವರ್ತಿಸುತ್ತಿರುವುದು ನಿಜವೇ; ಈ ಪದ್ಧತಿಗೆ ಅವಕಾಶ ನೀಡಿರುವುದು ಯಾರು; ಇದನ್ನು ತಪ್ಪಿಸಿ ಸಾರ್ವಜನಿಕ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲು ಸರ್ಕಾರ ಕ್ರಮ ವಹಿಸುವುದೇ?